ಕರ್ನಾಟಕ ಸರ್ಕಾರದ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ : ಸಿ4(1)ಕೆ.ಜಿ.ಬಿ.ವಿ.ಶಿನೇ-ಸ್ಥ-ಇತರೆ-01/2013-14 ದಿನಾಂಕ: 20-06-2012

ಜ್ಞಾಪನ

ವಿಷಯ: ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ಮಂಜೂರಾದ 7 ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಮತ್ತು 5 ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ವರ್ಗಾವಣೆ/ಸ್ಥಳಾಂತರ ಮೂಲಕ ಭರ್ತಿ ಮಾಡುವ ಬಗ್ಗೆ

ಉಲ್ಲೇಖ: 1. ನಿರ್ದೇಶಕರು (ಕಾರ್ಯಕ್ರಮಗಳು), ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ಇವರ ಪತ್ರ ಸಂಖ್ಯೆ ಸಾಶಿಅ/ಆಕ್ಸಿಸ್/ಕೆ.ಜಿ.ಬಿ.ವಿ/ಶಿ.ನೇ/12-13 ದಿನಾಂಕ: 18-06-2013

***** * *****

ಉಲ್ಲೇಖಿತ ನಿರ್ದೇಶಕರು (ಕಾರ್ಯಕ್ರಮಗಳು), ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ಇವರ ಪತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನದ 2010-11 ನೇ ಸಾಲಿನ ವಾರ್ಷಿಕ (ಪೂರಕ) ಯೋಜನೆಯಡಿಯಲ್ಲಿ ರಾಜ್ಯಕ್ಕೆ 7 ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಮತ್ತು 5 ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆಗಳು ಮಂಜೂರಾಗಿದ್ದು, ಈ ಶಾಲೆಗಳಲ್ಲಿ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ತತ್ಸಮಾನ ಹುದ್ದೆಯ ಒಬ್ಬರು ಮುಖ್ಯ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು ಇವುಗಳನ್ನು ವರ್ಗಾವಣೆ/ಸ್ಥಳಾಂತರ ಮೂಲಕ ಭರ್ತಿ ಮಾಡಲು ಕೋರಿರುತ್ತಾರೆ. ಸದರಿ ಪತ್ರದ ಸೂಚನೆಯಂತೆ ನಿಮ್ಮ ಜಿಲ್ಲೆಗಳಿಗೆ ಮಂಜೂರಾಗಿರುವ ಪ್ರೌಢ ಶಾಲಾ ಸಹಶಿಕ್ಷಕರು ಗ್ರೇಡ್-2 ವೃಂದದ ಹುದ್ದೆಗಳನ್ನು ಪ್ರಸ್ತುತ ವರ್ಗಾವಣೆ/ಸ್ಥಳಾಂತರ ಮೂಲಕ ಭರ್ತಿ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದೆ. ಸದರಿ ಹುದ್ದೆಗಳನ್ನು ಈ ಬಾರಿ ನಡೆಯುವ ಕೌನ್ಸಲಿಂಗ್ ನಲ್ಲಿ ಪ್ರಕಟಿಸಿ ಭರ್ತಿ ಮಾಡಲು ಸೂಚಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು ಸಲ್ಲಿಸಿರುವ ಪತ್ರ ಹಾಗೂ ಶಾಲೆಗಳು ಮತ್ತು ಖಾಲಿ ಹುದ್ದೆಗಳ ಪಟ್ಟಿಯನ್ನು ಈ ಜೊತೆ ಲಗತ್ತಿಸಿದೆ. ಸಲ್ಲಿಸಿರುವ ಪಟ್ಟಿಯಲ್ಲಿರುವ ಖಾಲಿ ಹುದ್ದೆಗಳನ್ನು ಪರಿಶೀಲಿಸಿಕೊಂಡು ಕೆ.ಜಿ.ಬಿ.ವಿ ಶಾಲೆಗಳು ಬಾಲಕಿಯರಿಗಾಗಿ ನಡೆಯುತ್ತಿರುವ ಶಾಲೆಗಳಾಗಿರುವುದರಿಂದ ಈ ಬಗ್ಗೆ ನಿರ್ದೇಶಕರ ಪತ್ರದ ಸೂಚನೆಯನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಆಯುಕ್ತರು

20/6/13

ಗೆ,

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗ
2. ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಮೈಸೂರು/ಗುಲ್ಬರ್ಗ/ಬೆಳಗಾವಿ
3. ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು ದಕ್ಷಿಣ, ದಕ್ಷಿಣ ಕನ್ನಡ, ಶಿವಮೊಗ್ಗ, ಧಾರವಾಡ
4. ನಿರ್ದೇಶಕರು (ಕಾರ್ಯಕ್ರಮಗಳು), ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ಕಛೇರಿ, ಬೆಂಗಳೂರು
5. ಕಛೇರಿ ಪ್ರತಿ

ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಸಂಖ್ಯೆ: ಸ.ಶಿ.ಅ/ಆಕ್ಸಿಸ್/ಕೆಜಿಬಿವಿ/ಶಿಕ್ಷಕರ ನೇಮಕಾತಿ/2012–13 ದಿನಾಂಕ: 18–06–2013

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

ಮಾನ್ಯರೆ,

ವಿಷಯ: ಸರ್ವ ಶಿಕ್ಷಣ ಅಭಿಯಾನದ ವತಿಯಂದ ಮಂಜೂರಾದ 7 ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಮತ್ತು 5 ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ವರ್ಗಾವಣೆ/ಸ್ಥಳಾಂತರ ಮೂಲಕ ಶಿಕ್ಷಕರನ್ನು ಭರ್ತಿ ಮಾಡುವ ಕುರಿತು

ಉಲ್ಲೇಖ:
1. ಈ ಕಛೇರಿಯ ಪತ್ರಗಳ ಸಂಖ್ಯೆ: ಸಶಿಅ/ಆಕ್ಸಿಸ್–30/ಟಿ.ಜಿ.ಟಿ & ಹಿ.ಪ್ರಾ.ಶಾ.ಶಿ.ನೇ/2012–13 ದಿನಾಂಕ: 20–02–2013 ಮತ್ತು ದಿನಾಂಕ: 31–05–2013
2. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಜ್ಞಾಪನ ಪತ್ರ ಸಂಖ್ಯೆ: ಸಿ3(1):ಪ್ರಾ:ಶಿ:ಹುದ್ದೆ:ಸ್ಥಳ:06:2008–09(ಭಾಗ–II) ದಿನಾಂಕ: 14–06–2010.

******

ಸರ್ವ ಶಿಕ್ಷಣ ಅಭಿಯಾನದ 2010–11ನೇ ಸಾಲಿನ ವಾರ್ಷಿಕ (ಪೂರಕ) ಯೋಜನೆಯಡಿಯಲ್ಲಿ ರಾಜ್ಯಕ್ಕೆ 7 ಹೊಸ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳು(ಕೆ.ಜಿ.ಬಿ.ವಿ) ಮತ್ತು ನಿರ್ಧಿಷ್ಟ ವರ್ಗಗಳ ಮಕ್ಕಳಿಗೆ 5 ವಿಶೇಷ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದ್ದು, ಸದರಿ ಶಾಲೆಗಳು ಶಾಶ್ವತ ಸ್ವರೂಪದ ಶಾಲೆಗಳಾಗಿರುತ್ತವೆ. ಈ ಶಾಲೆಗಳಿಗೆ ಶಾಲಾ ಕಟ್ಟಡ ನಿರ್ಮಿಸಲು ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ಈಗಾಗಲೇ ನಿಯಾಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. ವಿವಿಧ ಕಾರಣಗಳಿಂದ ಶಿಕ್ಷಣದಿಂದ ವಂಚಿತರಾಗಿರುವ ಮಕ್ಕಳಿಗೆ ಸದರಿ ಶಾಲೆಗಳ ಮೂಲಕ ವಸತಿ ಹಾಗೂ ಶಿಕ್ಷಣ ಸೌಲಭ್ಯ ನೀಡುವ ಉದ್ದೇಶದಿಂದ ಈ ಶಾಲೆಗಳನ್ನು ಸ್ಥಾಪಿಸಲಾಗಿದ್ದು, ಶಾಲೆಗಳಲ್ಲಿ ಪೂರ್ಣಕಾಲಿಕ ಖಾಯಂ ಶಿಕ್ಷಕರ ಹುದ್ದೆಗಳು ಖಾಲಿ ಇರುವುದರಿಂದ ಶಾಲೆಗಳಲ್ಲಿ ಪಾಠ ಬೋಧನೆಗೆ ತೊಂದರೆಯಾಗುತ್ತಿದೆ.

ಸದರಿ ಶಾಲೆಗಳಿಗೆ ಸಂಬಂಧಿಸಿದಂತೆ ಪ್ರತಿ ಶಾಲೆಗೆ ಮಂಜೂರಾಗಿರುವ ಪ್ರೌಢಶಾಲೆ ಸಹಾಯಕ ಶಿಕ್ಷಕರು–ಗ್ರೇಡ್–2 ತತ್ಸಮಾನ ಹುದ್ದೆಯ ಒಬ್ಬರು ಮುಖ್ಯ ಶಿಕ್ಷಕರ ಹುದ್ದೆ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರ ತತ್ಸಮಾನ ಹುದ್ದೆಯ 3 ಶಿಕ್ಷಕರ (ಕನ್ನಡ ಭಾಷೆ, ಆಂಗ್ಲ ಭಾಷೆ ಮತ್ತು ವಿಜ್ಞಾನ) ಹುದ್ದೆಗಳು ಖಾಲಿ ಇರುತ್ತವೆ. ಈ ಹುದ್ದೆಗಳಿಗೆ ಭರ್ತಿಯಾಗುವ ಶಿಕ್ಷಕರ ವೇತನಕ್ಕಾಗಿ ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ಪ್ರತಿ ಶಾಲೆಗೆ ವಾರ್ಷಿಕ ರೂ. 12 ಲಕ್ಷ ಅನುದಾನ ಲಭ್ಯವಿದೆ. ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಈ ಕಛೇರಿಯಿಂದ ಈಗಾಗಲೇ ಉಲ್ಲೇಖ–1ರ ಪತ್ರಗಳಲ್ಲಿ ಕೋರಲಾಗಿದೆ. (ಪತ್ರ ಲಗತ್ತಿಸಿದೆ).

ಈ ಹಿಂದೆಯೂ ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ನಡೆಸಲಾಗುತ್ತಿರುವ 64 ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳಿಗೆ ಇದೇ ರೀತಿಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಈ ಕಛೇರಿಯ ಕೋರಿಕೆ ಮೇರೆಗೆ ಉಲ್ಲೇಖ–2 ರ ಜ್ಞಾಪನದನ್ವಯ 192 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಸ್ಥಳಾಂತರ ಮೂಲಕ ಭರ್ತಿ ಮಾಡಲು ತಮ್ಮ ಕಛೇರಿಯಿಂದ ಕ್ರಮ ಕೈಗೊಂಡಿರುವುದನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಪ್ರಸ್ತುತ 7 ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳು ಮತ್ತು 5 ವಸತಿ ಶಾಲೆಗಳಲ್ಲಿರುವ ಒಟ್ಟು 48 ಶಿಕ್ಷಕರ ಹುದ್ದೆಗಳನ್ನು (12 ಪ್ರೌಢಶಾಲಾ ಸಹಾಯಕ ಶಿಕ್ಷಕರು–ಗ್ರೇಡ್–2 ಮತ್ತು 36 ಪ್ರಾಥಮಿಕ ಶಾಲಾ ಶಿಕ್ಷಕರು) ಜೂನ್–ಜುಲೈ 2013ರಲ್ಲಿ ನಡೆಸಲಿರುವ ಶಿಕ್ಷಕರ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಯಲ್ಲಿ (ಕೌನ್ಸಿಲಿಂಗ್ ಸಂದರ್ಭದಲ್ಲಿ) ಭರ್ತಿ ಮಾಡಿ ಗುಣಾತ್ಮಕ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲು ಕೋರಿದೆ.

ಕೆ.ಜಿ.ಬಿ.ವಿ ಶಾಲೆಗಳು ಬಾಲಕಿಯರಿಗಾಗಿ ನಡೆಯುತ್ತಿರುವ ಶಾಲೆಗಳಾಗಿರುವುದರಿಂದ ಈ ಶಾಲೆಗಳಿಗೆ ಮಹಿಳಾ ಶಿಕ್ಷಕರನ್ನು ಮತ್ತು ನಿರ್ದಿಷ್ಟ ವರ್ಗದ ಮಕ್ಕಳ ವಸತಿ ಶಾಲೆಗಳಲ್ಲಿ ಬಾಲಕರು ಮತ್ತು ಬಾಲಕಿಯರು ವ್ಯಾಸಂಗ ಮಾಡುತ್ತಿರುವುದರಿಂದ ಈ ಶಾಲೆಗಳಿಗೆ ಪ್ರತಿ ಶಾಲೆಯಲ್ಲಿ ಶೇ 50 ರಷ್ಟು ಮಹಿಳಾ ಶಿಕ್ಷಕರನ್ನು ವರ್ಗಾವಣೆ ಮೂಲಕ ತುಂಬಲು ಕೋರಿದೆ.

ವರ್ಗಾವಣೆ ಮೂಲಕ ಶಾಲಾ ವಾರು ತುಂಬಬೇಕಾಗಿರುವ ಶಿಕ್ಷಕರ ಹುದ್ದೆಗಳನ್ನು ಅನುಬಂಧದಲ್ಲಿ ಒದಗಿಸಿದೆ.

ವಂದನೆಗಳೊಂದಿಗೆ

ತಮ್ಮ ನಂಬುಗೆಯ

ನಿರ್ದೇಶಕರು(ಕಾರ್ಯಕ್ರಮಗಳು)

ಸರ್ವ ಶಿಕ್ಷಣ ಅಭಿಯಾನ–ಕರ್ನಾಟಕ

ಬೆಂಗಳೂರು

## ಅನುಬಂಧ

**ಹೊಸದಾಗಿ ಮಂಜೂರಾಗಿರುವ 7 ಕೆ.ಜಿ.ಬಿ.ವಿ. ಮತ್ತು 5 ನಿರ್ಧಿಷ್ಟ ವರ್ಗಗಳ ಮಕ್ಕಳ ವಸತಿ ಶಾಲೆಗಳಿಗೆ ಮುಖ್ಯಶಿಕ್ಷಕರ ಹಾಗೂ ಸಹ ಶಿಕ್ಷಕರ ಹುದ್ದೆಗಳ ಬಗ್ಗೆ**

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಶಾಲೆಯ ವಿಧ | ಶಾಲೆಯ ಹೆಸರು ಮತ್ತು ವಿಳಾಸ | ವರ್ಗಾವಣೆ ಮಾಡಬೇಕಾಗಿರುವ ಶಿಕ್ಷಕರ ವಿವರಗಳು (ಕನ್ನಡ ಮಾಧ್ಯಮ ಶಾಲೆಗಳು) | | | | | |
|---|---|---|---|---|---|---|---|---|---|---|
| | | | | | ಮುಖ್ಯ ಶಿಕ್ಷಕರು ಹುದ್ದೆ (ಪ್ರೌಢ ಶಾಲಾ ಸಹ ಶಿಕ್ಷಕರ ತತ್ಸಮಾನ ಹುದ್ದೆ) | ವಿಜ್ಞಾನ ಶಿಕ್ಷಕರು (ಪ್ರಾಥಮಿಕ ಶಾಲಾ ಶಿಕ್ಷಕರ ತತ್ಸಮಾನ ಹುದ್ದೆ) | ಭಾಷೆ ಶಿಕ್ಷಕರು (ಕನ್ನಡ)(ಪ್ರಾಥಮಿಕ ಶಾಲಾ ಶಿಕ್ಷಕರ ತತ್ಸಮಾನ ಹುದ್ದೆ) | ಭಾಷಾ ಶಿಕ್ಷಕರು (ಆಂಗ್ಲ) (ಪ್ರಾಥಮಿಕ ಶಾಲಾ ಶಿಕ್ಷಕರ ತತ್ಸಮಾನ ಹುದ್ದೆ) | ಒಟ್ಟು | ಷರಾ |
| 1 | ಮೈಸೂರು | ಹುಣಸೂರು | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಹಳೆ ಸಂತೆ ಮೈದಾನ,ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | ಕ್ರಮ ಸಂಖ್ಯೆ 1 ರಿಂದ 7 ರವರೆಗೆ ನಮೂದಿಸಿರುವ ಕೆ.ಜಿ.ಬಿ.ವಿ ಶಾಲೆಗಳಿಗೆ ಮಹಿಳಾ ಶಿಕ್ಷಕರಿಂದ ತುಂಬಲು ಕೋರಿದೆ. |
| 2 | ಮೈಸೂರು | ಮೈಸೂರು ಗ್ರಾಮಾಂತರ | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಆಲನಹಳ್ಳಿ ಮೈಸೂರು ಗ್ರಾಮಾಂತರ ತಾಲ್ಲೂಕು, ಮೈಸೂರು ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 3 | ಮೈಸೂರು | ನಂಜನಗೂಡು | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಕೆ.ಆರ್.ನಗರ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 4 | ಮೈಸೂರು | ಟಿ.ನರಸೀಪುರ | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಬನ್ನೂರು, ಟಿ.. ನರಸಿಪುರ ತಾಲ್ಲೂಕು, ಮೈಸೂರು ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 5 | ಮಂಡ್ಯ | ಮಳವಳ್ಳಿ | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಅಲಗುರು.. ಮಲವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 6 | ಮಂಡ್ಯ | ಪಾಂಡವಪುರ | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಹರೋಹಳ್ಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 7 | ಚಾಮರಾಜನಗರ | ಯಳಂದೂರು | ಕೆ.ಜಿ.ಬಿ.ವಿ | ಕೆ.ಜಿ.ಬಿ.ವಿ. ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 8 | ಬೆಂಗಳೂರು ನಗರ | ಬೆಂಗಳೂರು ದಕ್ಷಿಣ (ತಲಘಟ್ಟಪುರ) | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಆವರಣ ತಲಘಟ್ಟಪುರ, ಕನಕಪುರ ಮೈನ್ ರೋಡ್ ಬೆಂಗಳೂರು ದಕ್ಷಿಣ 1 ತಾ॥, ಬೆಂಗಳೂರು ಜಿಲ್ಲೆ | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | ಕ್ರಮ ಸಂಖ್ಯೆ 8 ರಿಂದ 12 ರವರೆಗೆ ನಮೂದಿಸಿರುವ ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆಗಳಿಗೆ ವರ್ಗಾವಣೆ ಸಂದರ್ಭದಲ್ಲಿ ಮಹಿಳಾ ಶಿಕ್ಷಕರಿಗೆ ಆದ್ಯತೆ ನೀಡಲು ಕೋರಿದೆ. |
| 9 | ಮೈಸೂರು | ದೊಡ್ಡಪೇಟೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ ಬೇಸಿಕ್ ನಜರಾಬಾದ್ ಹಿರಿಯ ಪ್ರಾಥಮಿಕ ಶಾಲಾ ಆವರಣ ಮೈಸೂರು ಉತ್ತರ ವಲಯ, ಮೈಸೂರು ಜಿಲ್ಲೆ. | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 10 | ದಕ್ಷಿಣ ಕನ್ನಡ | ಬೆಳ್ತಂಗಡಿ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ ಸರ್ಕಾರಿ ಮಾದರಿ ಶಾಲಾ ಆವರಣ ಬೆಳ್ತಂಗಡಿ ಮುಖ್ಯ ರಸ್ತೆ, ಬೆಳ್ತಂಗಡಿ ದಕ್ಷಿಣ ಕನ್ನಡ ಜಿಲ್ಲೆ. | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 11 | ಶಿವಮೊಗ್ಗ | ಆಗುಂಬೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆಗುಂಬೆ ತೀರ್ಥಹಳ್ಳಿ ತಾ॥, ಶಿವಮೊಗ್ಗ ಜಿಲ್ಲೆ. | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| 12 | ಧಾರವಾಡ | ಹುಬ್ಬಳ್ಳಿ (ಘಂಟಿಕೇರಿ) | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ | ನಿರ್ಧಿಷ್ಟ ವರ್ಗದ ಮಕ್ಕಳ ವಸತಿ ಶಾಲೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ .5 ನೆಹರು ಕಾಲೇಜ್ ಎದುರು ಘಂಟಿಕೇರಿ, ಹುಬ್ಬಳ್ಳಿ ಸಿಟಿ, ಧಾರವಾಡ ಜಿಲ್ಲೆ. | 1 (ವಿಜ್ಞಾನ ಶಿಕ್ಷಕರು – ಪಿ.ಸಿ.ಎಂ) | 1 | 1 | 1 | 4 | |
| | 7 ಕೆ.ಜಿ.ಬಿ.ವಿ ಶಾಲೆಗಳು ಮತ್ತು 5 ವಸತಿ ಶಾಲೆಗಳಿಗೆ ವರ್ಗಾವಣೆ ಮೂಲಕ ತುಂಬಬೇಕಾಗಿರುವ ಒಟ್ಟು ಹುದ್ದೆಗಳು | | | | 12 | 12 | 12 | 12 | 48 | |

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ- ಕರ್ನಾಟಕ